ಮಾಡಿಸ್ಕಂಡೋಗಿದ್ರು. ಮನೇಲಿದ್ದ ನೀರ್ನೆಲ್ಲ ಬ್ರಾಂದಿ ವಿಸ್ಕಿಗೆ ಬೆರೆಸ್ಕೊಂಬೋಕೆ ಖಾಲಿ ಬಾಟ್ಲಿಗೆ ಬಗಿಸ್ಕಂಡೋಗಿದ್ರು. ಸಾಲ್ದೆ ಬಂದು ನಿಮ್ಮ ತಂಬಿಗೇನೂ ಎತ್ಕಂಡೋಗಿರ್ಬೇಕು ಅನ್ನೆಕಾರ. ಊರಾದ ಊರ್ನೆಂಗುಸ್ರೆಲ್ಲ ಒಂದೊಂದ್ ತೊಟ್ ನೀರ್ಗೂ ಭಂಗ ಬೀಳ್ತಿದ್ರೆ ಗಂಡುಸ್ರು ಅರಾಸ ಇಲ್ದಂಗೆ ಎಲೆಕ್ಷನ್ ಅಂಥ ಓಡಾಡ್ಕೊಂಡು ಅವುರ್ ಕೊಡೊ ಪುಗ್ಸಟ್ಟೆ ಉಚ್ಚೆ ಕುಡ್ಕಂಡು ಮತ್ನಲ್ಲಿ ಮಜವಾಗವ್ರೆ...' ಎಂದು ಅಡುಗೆ ಮನೆಗೆ ಹೋಗಿ ಹಂಡೆಯ ತಳದಲ್ಲಿದ್ದ ನೀರನ್ನು ಬಗ್ಗಿಸಿಕೊಂಡು ಬಂದು ಕೊಟ್ಟಿದ್ದಳು. ಕರಿಯನುಮಪ್ಪ ನೀರು ಕುಡಿದು, ಬಚ್ಚಲಿಗೆ ಹೋಗಿ ಸಲೀಸಾಗಿ ಬಂದು ಉರುಳಿಕೊಂಡ.

ಮಾಮೂಲಿ ರಾತ್ರಿಗಳಂತೆ ಉಚ್ಚೆ ಮಾಡಿ ಬಂದು ಮಲಗಿದ ತಕ್ಷಣ ಇವೊತ್ತು ಯಾಕೋ ಕರಿಯನುಮಪ್ಪನಿಗೆ ನಿದ್ದೆ ಬರಲಿಲ್ಲ. ಸೊಸೆ ಕೊಟ್ಟ ನೀರಿನಿಂದ ಬಾಯಾರಿಕೆ ಸಂಪೂರ್ಣವಾಗಿ ಇಂಗಿದಂತೆ ಅನ್ನಿಸಲಿಲ್ಲ. ಥೂತ್, ಎಂಥ ದಿನಗಳನ್ನು ಕಾಣಬೇಕಾಯಿತು. ಸರಿಯಾಗಿ ಮಳೆ ಬಂದು, ಒಳ್ಳೆ ಬೆಳೆ ಬೆಳೆದು ಹತ್ತನ್ನೆರಡು ವರ್ಷಗಳ ಮೇಲಾಯಿತು. ಈ ನಾಲ್ಕು ವರ್ಷಗಳಿಂದೀಚೆಗಂತೂ ಮಳೆ ಸಂಪೂರ್ಣವಾಗಿ ಕೈಕೊಟ್ಟಿತ್ತು. ಕೆರೆ ಕಟ್ಟೆಗಳು ಒಣಗಿ ಬಿರುಕು ಬಿಟ್ಟು ನಿಂತಿದ್ದವು. ಹೊಲ ತೋಟಗಳಲ್ಲಿ ರೈತರು ಹಾಕಿಸಿದ್ದ ಬೋರ್‌ವೆಲ್‌ಗಳು ನೀರು ಹೊರಹಾಕುವ ಸಾಮರ್ಥ್ಯವನ್ನು ಮಕ್ಕಳು ಉಚ್ಚೆ ಉಯ್ಯುವ ಮಟ್ಟಕ್ಕೆ ಇಳಿಸಿಕೊಂಡಿದ್ದವು. ಇನ್ನು ಊರಿನಲ್ಲಿ ಕುಡಿಯುವ ನೀರಿಗಾಗಿ ಕೊರೆಸಿದ್ದ ಎರಡು ಬೋರ್‌ವೆಲ್‌ಗಳೂ ಮೂಲೆ ಸೇರಿದ ಗೂರಲು ರೋಗಿಯಂತೆ ಗೊರ ಗೊರ ಸದ್ದು ಮಾಡುತ್ತಾ ಗಾಳಿಯೊಂದಿಗೆ ಕಿರುಬೆರಳು ಗಾತ್ರದ ನೀರನ್ನು ಬಲವಂತದಿಂದೆಂಬಂತೆ ಕಕ್ಕುತ್ತಿದ್ದವು. ಬೋರ್‌ವೆಲ್ ಒತ್ತಿ ಒತ್ತಿ ಹೆಂಗಸರ ರಟ್ಟೆಗಳು ಬಿದ್ದು ಹೋದಂತಾಗಿ ಹಿಟ್ಟು ತೊಳೆಸುವಾಗ ಕೈಗಳು ಅದುರುತ್ತಿದ್ದವು. ನೀರಿಗಾಗಿ ಹೆಂಗಸರ ನಡುವೆ ನಡೆಯುತ್ತಿದ್ದ ಸಣ್ಣಪುಟ್ಟ ಜಗಳಗಳು ಬೋರ್‌ವೆಲ್‌ನಲ್ಲಿ ನೀರು ಸಣ್ಣಗಾಗ ತೊಡಗಿದಂತೆ ದೊಡ್ಡ ಗಲಾಟೆಗಳಾಗಿ ರೂಪಾಂತರಗೊಂಡು ಕೈ ಕೈ ಮಿಲಾಯಿಸುವ ಮಟ್ಟಕ್ಕೂ ಹೋಗಿ ಊರಿನ ಎಲ್ಲಾ ಹೆಂಗಸರ ಮನಸ್ಸುಗಳು ಒಲೆಗೆ ಹಸಿ ಸೌದೆ ಇಟ್ಟಾಗ ಹೊಗೆಯೊಂದಿಗೆ ಎದ್ದೇಳುವ ಕಿಡಿಗಳಂತೆ ರವಳುತ್ತಿದ್ದವು. ವಾರದ ಹಿಂದೆ ಖುದ್ದು ಜಿಲ್ಲಾ ಪಂಚಾಯತ್ ಪ್ರೆಸಿಡೆಂಟೇ ಮುಂದೆ ನಿಂತು ಇನ್ನೊಂದು ಹೊಸ ಬೋರ್‌ವೆಲ್ ಕೊರೆಸಿದ್ದರೂ, ಎಂಟು ನೂರು ಅಡಿ ಆಳಕ್ಕೋಗಿದ್ದರೂ ತೊಟ್ಟು ನೀರೂ ಬಿದ್ದಿರಲಿಲ್ಲ. ಬೋರ್‌ವೆಲ್ ಕೊರೆಸುವುದನ್ನು ಶುರುವಿನಿಂದಲೂ ವಿರೋಧಿಸುತ್ತಿದ್ದ ಪರಿಸರ ಪ್ರೇಮಿ ತಿಮ್ಮಯ್ಯ ಮೇಷ್ಟ್ರು, 'ಕೆಚ್ಚಲಿಗೆ ಕೈ ಇಟ್ಟು ಕರೆಯೋದ್ರ ಬದ್ಲು ಯಂತ್ರ ಇಟ್ಟು ಹೀರಿದ್ರೆ ಹಾಲು ಬದ್ಲು ಬರೋದು ರಕ್ತಾನೇ. ಭೂಮ್ತಾಯಿ ಗರ್ಭಕ್ಕೆ ಮನುಷ್ಯ ಇತಿಮಿತಿ ಇಲ್ದಂಗೆ ಲಗ್ಗೆ ಇಟ್ರೆ ಕಡ್ಗೆ ಬರಿ ಕಣ್ಣೀರೆ ದಕ್ಕೋದು. ಇವೊತ್ತು ಬೆಳ್ದಿರೊ ಮರಗಿಡ ಕಡ್ಕಂಬ್ತಾರೆ ಹೊರ್ತು ಯಾರೊಬ್ರೂ ಒಂದು ಗಿಡಗಂಟೆ ನೆಡ್ದಂಗಾದ್ರು. ಹಸಿರೇ ಇಲ್ದ್‌ಮ್ಯಾಲೆ ಮೋಡುಗಳದೆಂಗೆ ಗರ್ಭ ಕಟ್ತಾವೆ. ಆಳೋರು ಪ್ರಜೆಗಳ್ಗೆ ಶ್ರಮಪಟ್ಟು ದುಡ್ಯೋದನ್ನ, ಅನ್ಯೋನ್ಯವಾಗಿ ಬದುಕೋದನ್ನ ಕಲ್ಸೋದು ಬಿಟ್ಟು ಬಿಟ್ಟಿ ಸಾರಾಯಿ ಕುಡ್ಸಿ ದುಡ್ಯೋ ಶಕ್ತೀನೂ ಹಾಳುಮಾಡಿಬಿಟ್ರು, ಮನುಷ್ಯ ಸಂಬಂಧಗಳಿಗೂ ಕೊಳ್ಳಿ ಇಟ್‌ಬಿಟ್ರು. ಗುಟುಕು ನೀರಿಗೂ ಜನ ಬಡಿದಾಡ್ತಿದ್ರೆ ಕಾಲವಲ್ಲದ ಕಾಲ್ದಲ್ಲಿ ಎಲೆಕ್ಷನ್ ಮಾಡ್ತ ಕುಂತವ್ರೆ ಯಾವ ಖಭೋಗುಕ್ಕೊ...' ಎಂದು ಜಿಲ್ಲಾ ಪರಿಷತ್ ಪ್ರೆಸಿಡೆಂಟ್ ಮುಂದೆ ರೋಷ ಕಕ್ಕಿದ್ದರು. ಏನಾದರಾಗಲಿ ತಮ್ಮ ಪಕ್ಷದ ಕ್ಯಾಂಡಿಡೇಟನ್ನು ಬೈ ಎಲೆಕ್ಷನ್‌ನಲ್ಲಿ ಗೆಲ್ಲಿಸಬೇಕೆಂದು ಪಣತೊಟ್ಟಿದ್ದ ಪ್ರೆಸಿಡೆಂಟ್‌ಗೆ ತಿಮ್ಮಯ್ಯ ಮೇಷ್ಟ್ರ ಮಾತುಗಳಿಂದ ಉರಿದು ಹೋಗಿತ್ತು. ಆದರೂ